1) ಬೈಂದೂರಿನಲ್ಲಿ 1 X 5 ಎಂ.ವಿ.ಎ., 33:11 ಕೆ.ವಿ.ಉಪ ಕೇಂದ್ರದ ನಿರ್ಮಾಣವನ್ನು ಕೈಗೊಂಡಿದ್ದು, ನಿರ್ಮಾಣ ಕಾರ್ಯವು ಮುಕ್ತಾಯದ ಹಂತದಲ್ಲಿದೆ.

2) ಶಾಲಾಡಿಯಲ್ಲಿ 110:11 ಕೆ.ವಿ. 1X10 ಎಂ.ವಿ.ಎ. ಸಾಮರ್ಥ್ಯದ ಉಪ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಪೂರ್ವ ಭಾವಿ ಕೆಲಸಗಳನ್ನು ಕೈಗೊಳ್ಳಲಾಗಿದೆ. ನಿರ್ಮಾಣ ಕಾರ್ಯವನ್ನು 1996-97ರ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಿದೆ.

ಅ) ಏಪ್ರಿಲ್ 93 ರಿಂದ ಪ್ರಾರಂಭವಾಯಿತು. ಈ ಕೆಳಕಂಡ ಮುಖ್ಯ ಕಾರಣಗಳಿಂದ ಸದರಿ ಸಬ್ ಸ್ಟೇಷನ್‌ನ ನಿರ್ಮಾಣ ಕಾರ್ಯದಲ್ಲಿ ವಿಳಂಬ ಉಂಟಾಯಿತು,

1) ಕುಂದಾಪುರ - ಬೈಂದೂರು 33 ಕೆ.ವಿ.ಲೈನ್ ನಿರ್ಮಾಣದಲ್ಲಿ ಹಾಲಾಡಿ ಮತ್ತು ಚಕ್ರಾ ನದಿಗಳ ರಿವರ್ ಕ್ರಾಸಿಂಗ್‌ಗಾಗಿ ಟವರ್‌ಗಳನ್ನು ಹಾಕುವಲ್ಲಿ ಉಂಟಾದ ವಿಳಂಬ.

2) 33ಕೆ.ವಿ., ಲೈನ್‌ನ್ನು ಎಳೆಯುವಾಗ ಗೋದಂಬಿ ತೋಟಗಾರಿಕೆ ಇಲಾಖೆ ಅಧಿಕಾರಿಗಳಿಂದ ಅನುಮತಿ ದೊರೆಯುವಲ್ಲಿ ಉಂಟಾದ ವಿಳಂಬ

3) ಕುಂದಾಪುರ ಬೈಂದೂರು 33 ಕೆ.ವಿ, ಲೈನನನ್ನು ನಿರ್ಮಾಣ ಮಾಡುವಲ್ಲಿ ನ್ಯಾಯಾಲಯಗಳಿಂದ ಬಂದ ತಡೆಯಾಜ್ಞೆಗಳಿಂದ ಉಂಟಾದ ವಿಳಂಬ.

4) 33 ಕೆ.ವಿ., ಲೈನನ್ನು ನಿರ್ಮಾಣ ಮಾಡುವಾಗ ಮಾರ್ಗದಲ್ಲಿನ ಮರದ ಕೊಂಬೆಗಳನ್ನು ಕಡಿಯುವಲ್ಲಿ ಸಾರ್ವಜನಿಕರು ಉಂಟು ಮಾಡಿದ ಅಡಚಣೆಗಳಿಂದ ಉಂಟಾದ ವಿಳಂಬ.

ಸದರಿ ಸಬ್ ಸ್ಟೇಷನ್ ನಿರ್ಮಾಣ ಕಾರ್ಯವು ಮುಕ್ತಾಯ ಘಟ್ಟವನ್ನು ತಲುಪಿದ್ದು, ಮಾರ್ಚ್ 96ರ ಅಂತ್ಯದ ವೇಳೆಗೆ ಈ ಸಬ್ ಸ್ಟೇಷನ್ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ.

ಉದ್ಯೋಗ ಭರವಸೆ ಯೋಜನೆಯ ಪಟ್ಟಿ.

628 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಉದ್ಯೋಗ ಭರವಸೆ ಯೋಜನೆಯ ಪಟ್ಟಿ ತಯಾರಿಸುವ ಬಗ್ಗೆ ಸರ್ಕಾರವು ತಾಲ್ಲೂಕು ಪಂಚಾಯತ್ ಗಳಿಗೆ ಏನು ನಿರ್ದೇಶನ ನೀಡಿದೆ.

ಆ) ಕಾರ್ಯಕ್ರಮ ಅಡಿಯಲ್ಲಿ ಸರ್ಕಾರ ಎಷ್ಟು ಹಣ ನಿಗಧಿ ಮಾಡಿದೆ ಹಾಗೂ ಯಾವ ಮಾರ್ಗದರ್ಶನದ ಮೇಲೆ ಈ ಹಣ ವಿತರಣೆ ಆಗುವುದು,

ಇ) ಈ ಯೋಜನೆಯಡಿ ಅನುದಾನ ಕಾಮಗಾರಿ ಪಟ್ಟಿ, ಇತ್ಯಾದಿ ವಿಚಾರಗಳಲ್ಲಿ ಶಾಸಕರಿಗೆ ಸರ್ಕಾರವು ಯಾವ ಜವಾಬ್ದಾರಿಯನ್ನು ಹಂಚಿಕೊಟ್ಟಿದೆ,

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಉದ್ಯೋಗ ಭರವಸೆ ಯೋಜನೆಯಡಿ ಕೂಲಿಕಾರರ ಹೆಸರುಗಳ ಪಟ್ಟಿಗಳನ್ನು ತಯಾರಿಸಲು ಈಗಾಗಲೇ, ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ನಿರ್ದೇಶನ ನೀಡಲಾಗಿದೆ.

ಆ) ಉದ್ಯೋಗ ಭರವಸೆ ಯೋಜನೆಯಡಿ ಪ್ರಸ್ತುತ ಸಾಲಿಗೆ (1995-96) ರೂ.10000 ಲಕ್ಷಗಳ ಅನುದಾನವನ್ನು ನಿಗಧಿ ಮಾಡಲಾಗಿದೆ. ಕೇಂದ್ರ ಸರ್ಕಾರದ ಮಾರ್ಗದರ್ಶನ ಮೇರೆಗೆ ಹಣವನ್ನು ವಿತರಣೆ ಮಾಡಲಾಗುವುದು.

ಇ) ಉದ್ಯೋಗ ಭರವಸೆ ಯೋಜನೆಯ ಅನುಷ್ಠಾನದ ಬಗ್ಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಉದ್ಯೋಗ ಭರವಸೆ ಯೋಜನೆ ಸಮಿತಿಗಳಲ್ಲಿ ಶಾಸಕರನ್ನು ಸದಸ್ಯರಾಗಿ ನೇಮಕ ಮಾಡಲಾಗಿದೆ.

ಹುಬ್ಬಳ್ಳಿ ಧಾರವಾಡ ರಾಷ್ಟ್ರೀಯ ಹೆದ್ದಾರಿಯ ರಸ್ತೆ ನಿರ್ಮಾಣ ಕುರಿತು.

629 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿ ಧಾರವಾಡ ಮಹಾನಗರದ ನಡುವೆ ಹಾಯ್ದು ಹೋಗಿರುವ ರಾಷ್ಟ್ರೀಯ ಹೆದ್ದಾರಿ ರಸ್ತೆ ನಿರ್ಮಾಣ ಕೆಲಸ ಪೂರ್ಣ ಮುಗಿದಿದೆಯೇ,

ಆ) ಇಲ್ಲವಾದಲ್ಲಿ ಎಷ್ಟು ಮುಗಿದಿದೆ ಮತ್ತು ಎಷ್ಟು ಉಳಿದಿದೆ,

ಇ) ಇಲ್ಲಿಯವರೆಗೆ ಆದ ಖರ್ಚು ಎಷ್ಟು, ಇದರಲ್ಲಿ ಕೇಂದ್ರ ಸರ್ಕಾರದ ಪಾಲು ಎಷ್ಟು, ರಾಜ್ಯ ಸರ್ಕಾರದ ಪಾಲು ಎಷ್ಟು, ಸದರಿ ರಸ್ತೆ ಡಾಂಬರೀಕರಣ ಕೆಲಸ ತೃಪ್ತಿಕರವಾಗಿದೆಯೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಈಗಾಗಲೇ ಹುಬ್ಬಳ್ಳಿ-ಧಾರವಾಡ ಮಹಾನಗರ ನಡುವೆ ರಾಷ್ಟ್ರೀಯ ಹೆದ್ದಾರಿ ಇದೆ.

ಆ) 'ಅ' ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಹುಬ್ಬಳ್ಳಿ-ಧಾರವಾಡ ಮಹಾನಗರದ ನಡುವೆ ರಾಷ್ಟ್ರೀಯ ಹೆದ್ದಾರಿಯ ಆಯ್ದ ಭಾಗಗಳನ್ನು ಬಲಪಡಿಸಲು ಇದುವರೆವಿಗೂ 103 ಲಕ್ಷ ರೂ. ವೆಚ್ಚವಾಗಿದ್ದು, ಪೂರ್ತಿಯಾಗಿ ರಾಜ್ಯ ಸರ್ಕಾರ ಅನುದಾನದಿಂದ ಭರಿಸಲಾಗಿದೆ. ಡಾಂಬರೀಕರಣ ತೃಪ್ತಿಯಾಗಿದೆ.

ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ರೈತರಿಗೆ ತೊಂದರೆ.

632 - ಶ್ರೀ ಎಸ್. ಕರ್ಜಗಿ (ರಾಣೆಬೆನ್ನೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?